ಹುಬ್ಬಳ್ಳಿ ಮಹಾದೇವ ಟೆಕ್ಸ್‌ಟೈಲ್ಸ್ ಮಿಲ್ ಸುಧಾರಣೆ

308 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಜವಳಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹುಬ್ಬಳ್ಳಿ ಮಹದೇವ ಟೆಕ್ಸ್‌ಟೈಲ್ ಮಿಲ್ ಮುಚ್ಚುವ ಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಮಿಲ್ಲನ್ನು ಸುಧಾರಿಸಲು ಸರ್ಕಾರದವರು ಯಾವ ಕ್ರಮ ಕೈಗೊಂಡಿರುವರು?

ಇ) ಈ ಟೆಕ್ಸ್‌ಟೈಲ್ ಮಿಲ್ಲಿನಲ್ಲಿ ಎಷ್ಟು ಜನರು ಕೆಲಸ ಮಾಡುತ್ತಿರುವರು?

ಈ) ಕಳೆದ ಮೂರು ವರ್ಷಗಳಲ್ಲಿ ಈ ಮಿಲ್‌ನಲ್ಲಿ ಆದ ಲಾಭ ಹಾನಿಯೆಷ್ಟು? (ಸಂಪೂರ್ಣ ವಿವರ ನೀಡುವುದು)

ಉ) ಈ ಮಿಲ್‌ನಲ್ಲಿ ಈಗಿರುವ ಯಂತ್ರಗಳು ಬಹಳ ಹಳೆಯದಾಗಿದ್ದು ಇವುಗಳನ್ನು ತೆಗೆದು ಹೊಸ ಯಂತ್ರಗಳನ್ನು ಹಾಕಲು ಸರ್ಕಾರದವರು ಕ್ರಮ ಕೈಗೊಳ್ಳುವರೇ ಮತ್ತು ಇದಕ್ಕೆ ಎಷ್ಟು ಹಣ ಬೇಕಾಗುವುದು?

ಊ) ಕೇಂದ್ರ ಸರ್ಕಾರದ ನೆರವು ಪಡೆದು ಈ ಮಿಲ್ಲನ್ನು ನವೀಕರಿಸಲು ರಾಜ್ಯ ಸರ್ಕಾರದವರು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಹೆಚ್.ಕೆ. ಪಾಟೀಲ್ (ಜವಳಿ ರಾಜ್ಯ ಸಚಿವರು) :

ಅ) ಹೌದು

ಆ) ಸ್ಪಿನ್‌ಫೆಡ್, ಎನ್.ಟಿ.ಸಿ. ಹಾಗೂ ಸಿಟ್ರಾ ಸಂಸ್ಥೆಗಳ ಪ್ರತಿನಿಧಿಗಳು ಒಳಗೊಂಡು ರಚಿಸಲಾದ ತಾಂತ್ರಿಕ ಸಮಿತಿಯು ಮಹದೇವ ಟೆಕ್ಸ್‌ಟೈಲ್ಸ್ ಮಿಲ್ಲನ್ನು ಸಂದರ್ಶಿಸಿ ಕನಿಷ್ಟ ರಿಪೇರಿ ಹಾಗೂ ಅತ್ಯವಶ್ಯಕವಾದ ಆಧುನೀಕರಣಕ್ಕಾಗಿ 46.60 ಲಕ್ಷ ರೂ. ಬಂಡವಾಳ ಹೂಡಿಕೆಯ ಸಲಹೆಗಳನ್ನೊಳಗೊಂಡ ವರದಿ ನೀಡಿದೆ. ಈ ವರದಿ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಇ) 572

ಈ) ಗಿರಣಿಯು ಕಳೆದ 3 ವರ್ಷಗಳಲ್ಲಿ ಅನುಭವಿಸಿದ ನಷ್ಟದ ವಿವರಗಳು (ತಾತ್ಕಾಲಿಕ) ಈ ಕೆಳಕಂಡಂತೆ ಇವೆ.

ಕ್ರಮ ಸಂಖ್ಯೆ	ವರ್ಷ	ನಿವ್ವಳ ನಷ್ಟ (ರೂ. ಲಕ್ಷಗಳಲ್ಲಿ)
1.	1990-91	35.09
2.	1991-92	95.15
3.	1992-93	81.00

ಉ) ಮಿಲ್ಲಿನ ಆಧುನೀಕರಣ ಕೈಕೊಂಡಾಗ ಹಳೇ ಯಂತ್ರೋಪಕರಣ ಬದಲಿಸಿ ಆಧುನಿಕ ಯಂತ್ರೋಪಕರಣ ಬಳಸಲಾಗುವುದು. ಹಣಕಾಸಿನ ಅಂದಾಜು ಆಧುನೀಕರಣ ಅಧ್ಯಯನ ಕೈಗೊಂಡಾಗ ಖಚಿತವಾಗಿ ತಿಳಿಯುವುದು.

ಊ) ಯಾವುದೇ ಯೋಜನೆಯಡಿಯಲ್ಲಿ ಸಂಪನ್ಮೂಲ ಲಭ್ಯವಾಗುವುದಾದಲ್ಲಿ, ಕೇಂದ್ರ ಸರ್ಕಾರವೂ ಸಹ ಸೇರಿದಂತೆ ವಿವಿಧ ಮೂಲಗಳಿಂದ ಹಣ ಪಡೆಯುವ ವಿಷಯವನ್ನು ಸೂಕ್ತ ಸಮಯದಲ್ಲಿ ಪರಿಶೀಲಿಸಲಾಗುವುದು.

ರಾಜ್ಯದಲ್ಲಿ ಸರ್ವೆ ಮಾಡುವವರ ಸಂಖ್ಯೆ

317 - ಶ್ರೀ ಕರಿಯಣ್ಣ (ಹೊಳಿಹೊನ್ನೂರು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ಸರ್ವೆ ಮಾಡುವವರ ಸಂಖ್ಯೆ ಎಷ್ಟು?

ಆ) ಇದರಿಂದ ರಾಜ್ಯದ ಸರ್ವೆ ಕೆಲಸ ಸುಗಮವಾಗಿ ನಡೆಯುತ್ತಿದೆಯೇ?

ಇ) ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು ಹಾಗೂ ಇದನ್ನು ತುಂಬಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಧರ್ಮಸಿಂಗ್ (ಕಂದಾಯ ಸಚಿವರು) :

ಅ) 2,950

ಆ) ಮಂಜೂರಾಗಿರುವ ಹುದ್ದೆಗಳು 2,950 ಇದ್ದು, ಅದರಲ್ಲಿ ಕೇವಲ 1,513 ಜನ ಮಾತ್ರ ಕಾರ್ಯ ನಿರ್ವಹಿಸುತ್ತಿದ್ದು, ಉಳಿದ 1,437 ಹುದ್ದೆಗಳು ಖಾಲಿ ಇರುವ ಕಾರಣ, ಸರ್ವೇ ಕೆಲಸ ಸುಗಮವಾಗಿ ನಡೆಯುತ್ತಿಲ್ಲ.

ಇ) 1, 437

ಇಲಾಖೆಯ ವ್ಯಂದ ಮತ್ತು ನೇಮಕಾತಿ ನಿಯಮಕ್ಕೆ ತಿದ್ದುಪಡಿ ಮಾಡಲಾಗಿದೆ. ಅದರಂತೆ ನೇರ-ನೇಮಕಾತಿ ಮತ್ತು ಮುಂಬಡ್ತಿ ಹುದ್ದೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ತುಂಬಲು ಕ್ರಮ ಕೈಗೊಳ್ಳಲಾಗುತ್ತಿದೆ.

ಅಧ್ಯಕ್ಷರು : ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಉತ್ತರವನ್ನು ಮಂಡಿಸಲಾಯಿತು.

ಪ್ರಕಟಣೆ

ಅಧ್ಯಕ್ಷರು : ಭಾರತ ಸಂವಿಧಾನದ 203 (3)ನೇ ಅನುಚ್ಛೇದದ ಪ್ರಕಾರ 1994-95ನೇ ಸಾಲಿನ ಅನುದಾನಗಳ ಮೇಲಿನ ಬೇಡಿಕೆಗಳನ್ನು ವಿಧಾನ ಸಭೆಯ ಮುಂದೆ ಮಂಡಿಸಲು ಮಾನ್ಯ ರಾಜ್ಯಪಾಲರು ಶಿಫಾರಸ್ಸನ್ನು ನೀಡಿರುತ್ತಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಬರಗಾಲ ಮತ್ತು ಅತಿವೃಷ್ಟಿಯ ಬಗ್ಗೆ ಒಂದು ನಿಲುವಳಿ ಸೂಚನೆಯನ್ನು ವಿರೋಧಿ ಪಕ್ಷದ ನಾಯಕರು, ನಾವುಗಳು ಎಲ್ಲರೂ ಸೇರಿ ಕಳುಹಿಸಿಕೊಟ್ಟಿದ್ದೇವೆ. ಸಂತ್ರಸ್ತರಿಗೆ ಯಾವುದೇ ಸವಲತ್ತು ಸಿಕ್ಕಿಲ್ಲ.

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯಗಳು

(1) ರಾಜ್ಯದಲ್ಲಿ ಕೆಲವು ಕಡೆ ಅತಿವೃಷ್ಟಿಯಿಂದ ರೈತರು ಕಂಗಾಲಾಗಿರುವುದು.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಸುಮಾರು 94 ತಾಲ್ಲೂಕುಗಳಲ್ಲಿ ಅತಿವೃಷ್ಟಿಯಿಂದ ರೈತರು ಕಂಗಾಲಾಗಿದ್ದಾರೆ, ಸರಕಾರದಿಂದ ಯಾವುದೇ ಪರಿಹಾರವೂ ಸಿಕ್ಕಿಲ್ಲ, ಹಾಗಾಗಿ ಇದು ಅತಿಮುಖ್ಯವಾದ ವಿಷಯ, ಅದನ್ನು ಅಡ್‌ಜರ್ನ್‌ಮೆಂಟ್ ಮೋಷನ್ ಮುಖಾಂತರ ಎಲ್ಲಾ ಕಾರ್ಯಕಲಾಪಗಳನ್ನು ನಿಲ್ಲಿಸಿ ಚರ್ಚೆಗೆ ತೆಗೆದುಕೊಳ್ಳಬೇಕೆಂದು ನಾವು ಮತ್ತು ಬಿಜೆಪಿ ಸ್ನೇಹಿತರು ಮತ್ತಿತರು ಎಲ್ಲರೂ ಸೇರಿ ಒತ್ತಾಯ ಮಾಡುತ್ತಿದ್ದೇವೆ. ಇವೊತ್ತು ಅಡ್‌ಜರ್ನ್‌ಮೆಂಟ್ ಮೋಷನ್ ಬಗ್ಗೆ ಪ್ರಸ್ತಾವನೆ ಮಾಡಲು ನಮಗೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಹಲವಾರು ಬಾರಿ ಮಾನ್ಯ ಮುಖ್ಯಮಂತ್ರಿಯವರು ಮತ್ತು ಕಂದಾಯ ಸಚಿವರು ಸಭೆಯನ್ನು ಕೂಡ ಮಾಡಿದ್ದಾರೆ. ಆ ಸಭೆಯಲ್ಲಿ ನಾವು ಇದ್ದು, ಅಧಿಕಾರಿಗಳಿಗೆ ಹಲವಾರು ಸಲಹೆಗಳನ್ನು ಕೊಟ್ಟಿದ್ದೇವೆ. ಆದರೆ ಯಾವುದೇ ಸಲಹೆಗಳು ಇವೊತ್ತಿಗೂ ಜಾರಿಗೆ ಬರುತ್ತಾ ಇಲ್ಲ. ಕೇವಲ ಮಾತುಗಳು ಮತ್ತು ಭರವಸೆಗಳು ಮಾತ್ರ ಬರುತ್ತವೆಯೇ ವಿನಹ ಪ್ರೊಸೀಡಿಂಗ್ಸ್ ಎಲ್ಲಿವೆ ಅವುಗಳು ಏಕೆ ಇಂಪ್ಲಿಮೆಂಟ್ ಆಗುತ್ತಾ ಇಲ್ಲ, ಅದಕ್ಕೆ ಯಾರು ಅಡ್ಡ ಬರುತ್ತಿದ್ದಾರೆ ಎಂಬುದು ನಮಗೆ ಗೊತ್ತಾಗುತ್ತಿಲ್ಲ.